**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

ಉಪಸ್ಥಿತರು

**ಶ್ರೀಮತಿ ಪವಿತ್ರ.ಎಂ.ಡಿ, ಬಿ.ಎ., ಎಲ್ಎಲ್‌ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ,**
**ತರೀಕೆರೆ.**

**ಸಿ.ಸಿ.ನಂ.939/2017**

**ದಿನಾಂಕಃ 11ನೇ ಅಕ್ಟೋಬರ್ 2019**

**ಆ ದೇ ಶ**

**ಮಾನ್ಯ ಸಹಾಯಯಕ ಸರ್ಕಾರಿ ಅಬಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ.319 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಅರ್ಜಿ ಅನುಸೂಚಿಯಲ್ಲಿರುವ ನಮೂದು ಮಾಡಿರುವ ಮೂರು ವ್ಯವಕ್ತಿಗಳನ್ನು ಈ ಪ್ರಕರಣದಲ್ಲಿ ಆರೋಪಿತತರನ್ನಾಗಿಸಬೇಕೆಂದು ಪ ಪ್ರಾರ್ಥಿಸಿರುತ್ತಾರೆ.**

**2. ಅಬಿಯೋಜನೆಯ ಪ್ರಕರಣವೇನೆಂದರೆ, ದಿ.14.09.2017 ರಂದು ರಾತ್ರಿ 9.00 ಗಂಟೆಗೆ ದೂರುದಾರರು ಅವರ ಅಂಗಡಿಯಲ್ಲಿ ಇದ್ದಾಗ ಆರೋಪಿತರಾದ 1) ಸ್ವಾಮಿ, 2) ಹನುಮಂನತಪ್ಪ 3) ಕವಿತಾ, 4) ನಾಗರಾಜು, 5) ಶಶಿಕಲಾ, 6) ಮಂಜುಳಾ ಮತ್ತು 7) ಅಂಜನಪ್ಪನವರು ಸೇರಿಕೊಂಡು ಅವಾಚ್ಯ ಶಬ್ದಗಳಿಂದ ಬೈದು, ಹನುಮಂತಪ್ಪ ಮತ್ತು ಸ್ವಾಮಿ ಬಿದಿರಿನ ದೊಣ್ಣೆಯಿಂದ ದೂರುದಾರರ ಎಡಗೈ ರಟ್ಟೆಗೆ ಮತ್ತು ಮೊಣಕೈಗೆ ಹೊಡೆದಿದ್ದು ಉಳಿದವರು ನೆಲಕ್ಕೆ ಕೆಡವಿ ಕೈಗಳಿಂದ ಹಲ್ಲೆ ಮಾಡಿದ್ದು ಆರೋಪಿತರು ಜೀವ ಬೆದರಿಕೆ ಹಾಕಿರುವ ಕಾರಣ ಅವರ ವಿರುದ್ಧ ದೂರು ದಾಖಲಾಗಿದ್ದು ಪೋಲೀಸರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 323, 326, 506 ಸಹವಾಚಕ ಕಲಂ.34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಅಬಿಯೋಜನೆಯು ಮುಂದುವರಿದು ಹೇಳಿರುವುದೇನೆಂದರೆ ತನಿಖಾಧಿಕಾರಿಯವರು ತನಿಖೆಯ ನಂತರ ಆರೋಪಿತರ ಪೈಕಿ, 1, 2 , 4 ಮತ್ತು 7 ರವರ ವಿರುದ್ಧ ಆರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು 3, 5 ಮತ್ತು 6ನೇ ಆರೋಪಿತರನ್ನು ದೋಷಾರೋಪಣಾ ಪಟ್ಟಿಯಿಂದ**

ಕೈಬಿಟ್ಟಿರುತ್ತಾರೆ. ಆದರೆ ಚಾಸಾ-1 ರವರು ನ್ಯಾಯಾಲಯದ ಮುಂದೆ ತಮ್ಮ ಸಾಕ್ಷ್ಯವನ್ನು ನುಡಿಯವಾಗ ಅವರು ನೀಡಿದ ದೂರಿಗೆ ಅನುಗುಣವಾಗಿ ಪ್ರಥಮ ವರ್ತಮಾನ ವರದಿಯಲ್ಲಿ ಎಲ್ಲಾ 7 ಜನ ಆರೋಪಿತರು ಅವರ ಮೇಲೆ ಹಲ್ಲೆ ಮಾಡಿ ಸಾದಾ ಮತ್ತು ತೀವ್ರ ಸ್ವರೂಪದ ಗಾಯಪಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ ಬಗ್ಗೆ ಸಾಕ್ಷ್ಯ ನುಡಿದಿರುವ ಕಾರಣ ತನಿಖಾಧಿಕಾರಿಯವರು ಕೈ ಬಿಟ್ಟಿರುವ 3, 5 ಮತ್ತು 6ನೇ ಆರೋಪಿತರನ್ನು ಈ ಪ್ರಕರಣದಲ್ಲಿ ಆರೋಪಿತರನ್ನಾಗಿಸಿ ವಿಚಾರಣೆ ನಡೆಸಬೇಕೆಂದು ಪ್ರಾರ್ಥಿಸಿರುತ್ತಾರೆ.

3. ಅರ್ಜಿಯ ನೋಟೀಸು ಜಾರಿಯಾದ ನಂತರ 3, 5 ಮತ್ತು 6ನೇ ಆರೋಪಿತರು ತಮ್ಮ ವಕೀಲರ ಮೂಲಕ ನ್ಯಾಯಾಲಯದಲ್ಲಿ ಹಾಜರಾಗಿದ್ದು ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರು ಸಲ್ಲಿಸಿರುವ ಅರ್ಜಿಗೆ ತಮ್ಮ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಆರೋಪಿತರು ತಮ್ಮ ತಕರಾರು ಅರ್ಜಿಯಲ್ಲಿ ಪ್ರಸ್ತುತ ಪ್ರಕರಣವು ವಿಚಾರಣಾ ಹಂತದಲ್ಲಿದ್ದು ಚಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಉದ್ದೇಶಪೂರ್ವಕವಾಗಿ, 3, 5 ಮತ್ತು 6ನೇ ಆರೋಪಿತರ ಹೆಸರನ್ನು ಹೇಳಿದ್ದು ಪ್ರಸ್ತುತ ಪ್ರಕರಣಕ್ಕೂ, ಸದರಿ 3, 5 ಮತ್ತು 6ನೇ ಆರೋಪಿತರಿಗೂ ಯಾವುದೇ ರೀತಿಡಿಯ ಸಂಬಂಧವಿರುವುದಿಲ್ಲವೆಂದು ಹೇಳಿರುತ್ತಾರೆ. ಅವರು ಮುಂದುವರಿದು 3, 5 ಮತ್ತು 6ನೇ ಆರೋಪಿತರನ್ನು ಉದ್ದೇಶಪೂರ್ಕವಾಗಿ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸೇರಿಸಿರುವ ಕಾರಣ ಅವರನ್ನು ಪ್ರಸ್ತುತ ಪ್ರಕರಣದಿಂದ ಕೈಬಿಡಬೇಕಾಗಿ ಪ್ರಾರ್ಥಿಸಿರುತ್ತಾರೆ.

4. ವಾದವನ್ನು ಕೇಳಲಾಯಿತು.

5. ಪ್ರಸ್ತುತ ಪ್ರಕರಣದ ಕಡತವನ್ನು ಪರಿಶೀಲಿಸಲಾಯಿತು. ಪ್ರಸ್ತುತ ಪ್ರಕರಣದಲ್ಲಿ ಅಜ್ಜಂಪುರ ಪೊಲೀಸರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ 504, 323, 326, 506 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಪ್ರಸ್ತುತ ಪ್ರಕರಣದ ಈಗ ವಿಚಾರಣಾ ಹಂತದಲ್ಲಿರುತ್ತದೆ. ಅಭಿಯೋಜನೆಯು ದಿನಾಂಕ 14.09.2017 ರಂದು ರಾತ್ರಿ 9-00 ಗಂಟೆಗೆ ಚಾಸಾ.1 ರವರು ಅವರ ಅಂಗಡಿಯಲ್ಲಿದ್ದಾಗ 7 ಜನ ಆರೋಪಿತರು ಸೇರಿಕೊಂಡು ಅವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಅವರಲ್ಲಿ 1 ಮತ್ತು 2ನೇ ಆರೋಪಿತರು ಬಿದಿರಿನ

ದೊಣ್ಣೆಯಿಂದ ಚಾಸಾ.1 ರವರ ಎಡಗೈ ರಟ್ಟೆಗೆ ಮತ್ತು ಮೊಣಕೈಗೆ ಹೊಡೆದಿದ್ದು, ಉಳಿದವರು ನೆಲಕ್ಕೆ ಕೆಡವಿ ಕೈಗಳಿಂದ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆಂದು ಆರೋಪಿಸಿರುತ್ತದೆ. ತನಿಖಾಧಿಕಾರಿಯವರು ಪ್ರಸ್ತುತ ಪ್ರಕರಣದ ತನಿಖೆಯ ನಂತರ 1, 2, ಮತ್ತು7 ನೇ ಆರೋಪಿತರ ವಿರುದ್ಧ ಮಾತ್ರ ಆರೋಪಣಾ ಪಟ್ಟಿ ಸಲ್ಲಿಸಿದ್ದು, 3, 5 ಮತ್ತು 6 ನೇ ಆರೋಪಿತರ ವಿರುದ್ಧ ಆರೋಪ ಸಾಬೀತಾಗಿರುವುದಿಲ್ಲವೆನ್ನುವ ಕಾರಣಕ್ಕೆ ಅವರನ್ನು ದೋಷಾರೋಪಣಾ ಪಟ್ಟಿಯಿಂದ ಕೈ ಬಿಟ್ಟಿರುತ್ತಾರೆ. ಆದರೆ, ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಎಲ್ಲಾ 7 ಜನ ಆರೋಪಿತರು ಅವರ ಮೇಲೆ ಹಲ್ಲೆ ಮಾಡಿ ಅವರಿಗೆ ಸಾದಾ ಮತ್ತು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಅವರನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. 3, 5, 6 ನೇ ಆರೋಪಿತರ ತಮ್ಮ ವಕೀಲರ ಮುಖಾಂತರ ಹಾಜರಾಗಿದ್ದು, ಅವರು ತಮ್ಮ ತಕರಾರು ಅರ್ಜಿಯಲ್ಲಿ ಪ್ರಾಸಾ.1 ರವರು ಉದ್ದೇಶಪೂರ್ವಕವಾಗಿ ಅವರ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಅವರು ಆರೋಪಿಸಿದಂತೆ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದು ಹೇಳಿರುತ್ತಾರೆ. ಆದರೆ, 3, 5 ಮತ್ತು 6 ನೇ ಆರೋಪಿತರು ಪ್ರಾಸಾ.1 ರವರು ಆರೋಪಿಸಿದಂತೆ ಕೃತ್ಯ ಎಸಗಿರುತ್ತಾರೆಯೇ ಇಲ್ಲವೇ ಎಂಬುದು ಪ್ರಕರಣದ ಸಂಪೂರ್ಣ ವಿಚಾರಣೆಯಾದ ನಂತರ ನಿರ್ಧರಿಸಬಹುದಾದ ಅಂಶವಾಗಿರುತ್ತದೆ. ಈ ಹಂತದಲ್ಲಿ ಪ್ರಾಸಾ.1 ರವರು 3, 5 ಮತ್ತು 6 ನೇ ಆರೋಪಿತರ ಅವರ ಮೇಲೆ ಹಲ್ಲೆ ನಡೆಸಿದ್ದು, ಅವಾಚ್ಯ ಶಬ್ಧಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆಂದು ಆರೋಪಿಸಿರುವ ಕಾರಣ ಸದರಿ ಆರೋಪಿದ ಸತ್ಯಾಸತ್ಯತೆಗಳನ್ನು ಪರಿಶೀಲಿಸಲು ಪ್ರಕರಣ ಸಂಪೂರ್ಣ ವಿಚಾರಣೆಯ ಅಗತ್ಯವಿರುತ್ತದೆನ್ನುವ ಅಭಿಪ್ರಾಯಕ್ಕೆ ಬಂದು ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.319 ರಡಿಯಲ್ಲಿ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ.

**ತತ್ಪರಿಣಾಮವಾಗಿ, ಅಭಿಯೋಜನೆಯು ಹೇಳಿರುವಂತೆ 3, 5 ಮತ್ತು 6 ನೇ ಆರೋಪಿತರನ್ನು ಪ್ರಸ್ತುತ ಪ್ರಕರಣದಲ್ಲಿ ಸೇರಿಸಲಾಗಿರುತ್ತದೆ.**

**ಸಹಿ/-**

**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ**
**ಪ್ರ.ದ.ನ್ಯಾ.ದಂ ; ತರೀಕೆರೆ.**